**ದಿನಾಂಕಃ 16.07.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಗಳ ಪರ ವಕೀಲರಿಂದಃ**

ವಾದಿಗೆ ಪ್ರತಿವಾದಿಗಳು ನಿಡಿ-3 ರ ದಾಖಲೆಯನ್ನು ನೋಂದಣಿ ಮಾಡಿಕೊಡುವಾಗ ಉಪನೊಂದಣಾಧಿಕಾರಿಯವರ ಕಛೇರಿಗೆ ನಾನು ಹೋಗಿದ್ದೆನು. ಸದರಿ ದಾಖಲೆಯನ್ನು ನೊಂದಣಿ ಮಾಡಿ ಕೊಡುವಾಗ ವಾದಿಯು ಪ್ರತಿವಾದಿಗಳ ಬಳಿ ಮೂರನೇ ಮಹಡಿಯ ಕ್ರಯ ಪತ್ರವನ್ನು ಸಹಾ ಮಾಡಿಕೊಡುವಂತೆ ಕೇಳಿದ್ದರು. ನಿಡಿ-3 ರ ದಾಖಲೆಯಲ್ಲಿಯೇ ಮಾಡಿಕೊಡಿ ಎಂದು ಕೇಳಿದರೇ ಎಂದರೆ ಸಾಕ್ಷಿ ನುಡಿಯುತ್ತಾರೆ ಹೌದು, ಆ ರೀತಿ ಕೇಳುವಾಗ ಪ್ರತಿವಾದಿಗಳು ಸ್ವಲ್ಪ ಸಾಲ ಇದೆ, ಆಮೇಲೆ ಮಾಡಿಕೊಡುತ್ತೇವೆ ಎಂದು ಹೇಳಿದರು. ನಿಡಿ-3 ರ ದಾಖಲೆ ಆಗುವಾಗ ಸದರಿ ಸ್ವತ್ತಿನ ಮೇಲೆ ಸಾಲ ಇದ್ದ ಕಾರಣ ವಾದಿಯು ಪ್ರತಿವಾದಿಗಳಿಗೆ ಯಾವುದೇ ಹಣವನ್ನು ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ನಿಡಿ-3 ರ ದಾಖಲೆ ನೊಂದಣಿ ಆಗುವಾಗ ವಾದಿಯು ಪ್ರತಿವಾದಿಗಳಿಗೆ 4 ಲಕ್ಷ ರೂ. ಗಳನ್ನು ಪಾವತಿಸಿರುತ್ತಾರೆ. ವಾದಿಯು ಸದರಿ ಹಣವನ್ನು ಪ್ರತಿವಾದಿಗಳಿಗೆ ಪಾವತಿಸುವಾಗ ನಾನು ಹಾಜರಿದ್ದೆನು. ನಿಡಿ-3 ರ ದಾಖಲೆಗೆ ನಾನು ಸಹಿ ಮಾಡಿಲ್ಲ. ಎಷ್ಟು ಮೊಬಲಗುಗಳ ಹಣವನ್ನು ಪಾವತಿಸಿರುತ್ತಾರೆ ಎಂದರೆ ಸಾಕ್ಷಿ ನುಡಿಯುತ್ತಾರೆ ನನಗೆ ಅದು ಗೊತ್ತಿಲ್ಲ. ಸದರಿ ಹಣವನ್ನು ವಾದಿಯು ಪ್ರತಿವಾದಿಗಳಿಗೆ ಉಪನೊಂದಣಾಧಿಕಾರಿಯವರ ಕಛೇರಿಯ ಒಳಗೆ ಕೊಟ್ಟಿರುತ್ತಾರೆ. ವಾದಿಯು ಪ್ರತಿವಾದಿಗಳಿಗೆ ಹಣವನ್ನು ಸಾಲ ಮಾಡಿ ತಂದು

ಕೊಟ್ಟಿರುತ್ತಾರೆ. ವಾದಿಯು ನನ್ನ ಬಳಿ ಕ್ರಯ ಪತ್ರಕ್ಕೆ ಸಹಿ ಮಾಡಲು ಕೇಳಿಕೊಳ್ಳಲಿಲ್ಲ. ನಿಡಿ-3 ರ ಕ್ರಯ ಪತ್ರವನ್ನು ಮಾಡಿಕೊಡುವಾಗ ಲತಾ ಎನ್ನುವವರು ಸಹಾ ಇದ್ದರು. ಅವರು ಕ್ರಯ ಪತ್ರಕ್ಕೆ ಸಹಿಯನ್ನು ಮಾಡಿರುತ್ತಾರೆ ಹಾಗೂ ಅವರ ಕೈಯಿಂದ ಹಣ ಕೊಡಿಸಿರುತ್ತಾರೆ. ವಾದಿಯು ಲತಾ ರವರಿಗೆ ಹಣವನ್ನು ನೀಡಿ ಅದನ್ನು ರಾಜಮ್ಮಗೆ ಕೊಡಲು ಹೇಳಿದರು. ನಾನು ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಲತಾ ಎನ್ನುವವರು ಉಪನೊಂದಣಾಧಿಕಾರಿಯವರ ಕಛೇರಿಗೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ಆ ದಿನ ವಾದಿಯು ಪ್ರತಿವಾದಿಗಳಿಗೆ ಯಾವುದೇ ಹಣವನ್ನು ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ನಿಡಿ-3 ರ ಕ್ರಯ ಪತ್ರಕ್ಕೆ ಲತಾ ಎನ್ನುವವರು ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ದಿನಾಂಕ 16.07.2010 ರ Family Arragement Agreement ಎಂಬ ದಾಖಲೆಯನ್ನು ನಾನು ನೋಡಿದ್ದೇನೆ. ಸದರಿ ದಾಖಲೆಯನ್ನು ಉಪನೊಂದಣಾಧಿಕಾರಿಯವರ ಕಛೇರಿಯಲ್ಲಿ ನೊಂದಣಿ ಮಾಡಿದ್ದಾರೆ. ನಾನು ಸದರಿ ದಾಖಲೆಗೆ ಸಹಿ ಮಾಡಿದ್ದೇನೆಯೇ ಎಂದರೆ ಸಾಕ್ಷಿ ನುಡಿಯುತ್ತಾರೆ ಉಪನೊಂದಣಾಧಿಕಾರಿಯವರ ಕಛೇರಿಯಲ್ಲಿ ಸಹಿ ಮಾಡಿದ್ದೇನೆ. ಸದರಿ ದಾಖಲೆಗೆ ನನ್ನನ್ನು ಹೊರತುಪಡಿಸಿ ಒಟ್ಟು ಎಷ್ಟು ಜನ ಸಹಿ ಮಾಡಿದ್ದಾರೆ ಎಂದರೆ ಸಾಕ್ಷಿ ನುಡಿಯುತ್ತಾರೆ 11 ಜನ ಸಹಿ ಮಾಡಿಕೊಟ್ಟಿರುತ್ತೇವೆ. ಸದರಿ ದಾಖಲೆಯನ್ನು ಮಾಡಿಕೊಡುವಾಗ ನಾವು ಯಾವುದೇ ಹಣವನ್ನು ಸ್ವೀಕರಿಸಲಿಲ್ಲ. ದಿನಾಂಕ 16.07.2010 ರ Family Arragement Agreement ಎಂಬ

ದಾಖಲೆಯನ್ನು ಮಾಡಿಕೊಟ್ಟ ಉದ್ದೇಶವೇನೆಂದರೆ ಸಾಕ್ಷಿ ನುಡಿಯುತ್ತಾರೆ ಹೆಣ್ಣು ಮಕ್ಕಳು ಅಶೋಕನಿಗೆ ಹಾಗೂ ಗಂಡು ಮಕ್ಕಳು ರಾಜೇಂದ್ರನಿಗೆ ದಾಖಲೆಗಳನ್ನು ಮಾಡಿಕೊಡುವುದು, ಸಾಲ ಮಂಜೂರಾದಾಗ ಪುನಃ ದಾಖಲೆಗಳನ್ನು ಮಾಡಿಕೊಡುತ್ತೇನೆ ಎಂದು ಹೇಳಿದರು. ದಿನಾಂಕ 16.07.2010 ರಂದು Family Arragement Agreement ಎಂಬ ದಾಖಲೆಯೇ ನೊಂದಣಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಆ ರೀತಿ ಯಾವುದೇ ದಾಖಲೆಗಳನ್ನು ಯಾರೂ ಸಹಾ ಮಾಡಿಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ದಿನಾಂಕ 16.07.2010 ರ Family Arragement Agreement ಎಂಬ ದಾಖಲೆ ಇದೆ ಹಾಗೂ ಆ ಬಗ್ಗೆ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳುವಂತೆ ನಾನು ನನ್ನ ವಕೀಲರಿಗೆ ಹೇಳಿರುವುದಿಲ್ಲ. ವಾದಿಯು ಮೂರನೇ ಮಹಡಿಯ ಸ್ವತ್ತಿಗೆ ಸಂಬಂಧಿಸಿದಂತೆ ಪ್ರತಿವಾದಿಗಳಿಗೆ ಯಾವುದೇ ಹಣವನ್ನು ಪಾವತಿಸಿರಲಿಲ್ಲ ಎಂದರೆ ಸರಿಯಲ್ಲ. ಯಾವಾಗ ವಾದಿಯು ಮೂರನೇ ಮಹಡಿಯ ಸ್ವತ್ತಿಗೆ ಸಂಬಂಧಿಸಿದಂತೆ ಪ್ರತಿವಾದಿಗಳಿಗೆ ಹಣ ನೀಡಿದರು ಎಂದರೆ ಸಾಕ್ಷಿ ನುಡಿಯುತ್ತಾರೆ ಪ್ರತಿ ತಿಂಗಳು ಹಣ ನೀಡುತ್ತಿದ್ದರು, 5-6 ತಿಂಗಳ ಕಾಲ 5 ಸಾವಿರ ರೂ.ರಂತೆ ಸಾಲಕ್ಕೆ ಹಣವನ್ನು ನೀಡುತ್ತಿದ್ದರು. ಪೂರ್ತಿ ಹಣವನ್ನು ವಾದಿ ಪ್ರತಿವಾದಿಗಳಿಗೆ ಪಾವತಿಸಿಲ್ಲ ಎಂದರೆ ಸರಿ. ಮೂರನೇ ಮಹಡಿಯ ಸ್ವತ್ತು ವಾದಿಗೆ ಸೇರಿದ ಸ್ವತ್ತು ಅಲ್ಲ ಎಂದರೆ ಸರಿಯಲ್ಲ. ಅದರಲ್ಲಿ ವಾದಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ವಾದಿಗೆ ಎರಡನೇ ಮಹಡಿಯನ್ನು ನೊಂದಣಿ ಮಾಡಿಕೊಡುವಾಗ ವಾದಿಯು ಪ್ರತಿವಾದಿಗಳಿಗೆ ಯಾವುದೇ ಹಣವನ್ನು

ಪಾವತಿಸಿಲ್ಲ ಎಂದರೆ ಸರಿಯಲ್ಲ. ವಾದಿಯ ಸುಳ್ಳು ದಾವೆಗೆ ವಾದಿಯಿಂದ ಹಣ ಪಡೆದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಗಿದೆ )

ಓ.ಹೇ.ಕೇ. ಸರಿ.ಇದೆ.

**(ವೇದ ಮೂರ್ತಿ ಬಿ.ಎಸ್)**
(ಪ್ರಭಾರ) 5 ನೇ ಅಪರ ನಗರ ಸಿವಿಲ್ ಮತ್ತು
ಸತ್ರ ನ್ಯಾಯಾಧೀಶರು, ಬೆಂಗಳೂರು.